# ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

## ವಿಷಯದ ಸಂಖ್ಯೆ:26/2010-11

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಓಕಳಿಪುರಂ ಮತ್ತು ಫೌಂಟೆನ್ ವೃತ್ತದವರೆಗೆ ಹೊಸ ಕಾರಿಡಾರ್ ನಿರ್ಮಾಣ ಮಾಡಿ, ಕೇಂದ್ರ ಸ್ಥಾನದಲ್ಲಿ ಸಿಗ್ನಲ್ ಫ್ರೀ ಜಂಕ್ಷನ್ ನಿರ್ಮಾಣ ಮಾಡಲು ಯೋಜನೆಯನ್ನು ತಯಾರಿಸಲಾಗಿರುತ್ತದೆ. ಈ ಯೋಜನೆಯಲ್ಲಿ, ಬೆಂಗಳೂರು–ತುಮಕೂರು ಮತ್ತು ಬೆಂಗಳೂರು – ಚೆನ್ನೈ ರೈಲು ಮಾರ್ಗಗಳಿಗೆ ಹೊಸದಾಗಿ ಆರ್.ಯು.ಬಿ ನಿರ್ಮಾಣ ಮಾಡಬೇಕಾಗಿರುತ್ತದೆ ಹಾಗೂ ಬೆಂಗಳೂರು ಕೇಂದ್ರ ರೈಲು ನಿಲ್ದಾಣದಲ್ಲಿ ರೈಲ್ವೇ ಇಲಾಖೆಯ ವತಿಯಿಂದ ನೂತನವಾದ ರೈಲ್ವೇ ನಿಲ್ದಾಣ ನಿರ್ಮಾಣಕ್ಕೆ ಯೋಜನೆ ಮಂಜೂರಾಗಿದ್ದು, South Western Railway ರವರು ಕಟ್ಟಡ ನಿರ್ಮಾಣದ ನೀಲ ನಕ್ಷೆಯನ್ನು ಸಹಾ ತಯಾರಿಸಿದ್ದು, ಈ ನಕ್ಷೆ ಮತ್ತು ವಿವರಗಳನ್ನು ರೈಲ್ವೇ ಇಲಾಖೆಯಿಂದ ಪಡೆದು ಈ ಯೋಜನೆಯಲ್ಲಿ ಸಾರ್ವಜನಿಕರು ರೈಲು ನಿಲ್ದಾಣಕ್ಕೆ ಬಂದು ಹೋಗುವುದನ್ನು ಸೇರಿಸಿಕೊಂಡು ಒಟ್ಟಾರೆಯಾಗಿ, ಸಂಪೂರ್ಣ ಯೋಜನೆಯನ್ನು ತಯಾರಿಸಲಾಗಿರುತ್ತದೆ.

ಸದರಿ ಯೋಜನೆಯ ವಿವರಗಳನ್ನು ಮತ್ತು ನಕ್ಷೆಯನ್ನು ಈಗಾಗಲೇ South Western Railway ಗೆ ಕಳುಹಿಸಲಾಗಿರುತ್ತದೆ ಹಾಗೂ ನಗರಾಭಿವೃದ್ಧಿ ಸಚಿವರ ಸಮ್ಮುಖದಲ್ಲಿ ಮಾನ್ಯ ಆಯುಕ್ತರ ನೇತೃತ್ವದಲ್ಲಿ ಹಲವಾರು ಸಭೆಗಳು ನಡೆದಿದ್ದು, ಇದರಲ್ಲಿ South Western Railway ಇಲಾಖೆಯ ಅಧಿಕಾರಿಗಳು ಸಹಾ ಭಾಗವಹಿಸಿರುತ್ತಾರೆ. ಈ ಯೋಜನೆ ನಿರ್ಮಾಣಕ್ಕೆ South Western Railway ಯ 12,818 ಚ.ಮೀ ಜಾಗ ಬೇಕಾಗಿರುತ್ತದೆ. ಸದರಿ ಯೋಜನೆಯ Total Concept Plan ಗೆ South Western Railway ರವರು ಒಪ್ಪಿಗೆ ನೀಡಿದ್ದು, ಮೆ॥ ಮಾನಸ ಸಲಹೆಗಾರರನ್ನು ನೇಮಿಸಿಕೊಂಡು ಎರಡು ಆರ್.ಯು.ಬಿ. ನಿರ್ಮಾಣಕ್ಕೆ ಈಗಾಗಲೇ ಜಿ.ಎ.ಡಿ (GAD) ತಯಾರಿಸಿ, South Western Railway ರವರಿಗೆ ಅನುಮೋದನೆಗಾಗಿ ಕಳುಹಿಸಲಾಗಿರುತ್ತದೆ. ಈ ಎರಡು ಆರ್.ಯು.ಬಿ ನಿರ್ಮಾಣ ವನ್ನು South Western Railway ಇಲಾಖೆಯವರೇ ನಿರ್ವಹಿಸಬೇಕಾಗಿರುತ್ತದೆ.

ಮುಂದುವರೆದು, ಈ ಯೋಜನೆಯನ್ನು Prof. Justo ರವರ ನೇತೃತ್ವದ ಪಾಲಿಕೆಯ Technical Advisory Committee ಮುಂದೆ ದಿನಾಂಕ:05/09/2009 ರಂದು ಮಂಡಿಸಲಾಗಿ Technical Advisory Committee ಯ ಸಭೆಯಲ್ಲಿ ಯೋಜನೆಯ ವಿವರಗಳನ್ನು ಪರಿಶೀಲಿಸಿ, ವಿವರವಾದ ಪರಿಶೀಲನೆಯ ನಂತರ ದಿನಾಂಕ:17/09/2009 ರಂದು ಸಮಿತಿಯು ಒಪ್ಪಿಗೆ ನೀಡಿರುತ್ತದೆ ಹಾಗೂ ದಿನಾಂಕ:13/11/2008 ರ ಮಾನ್ಯ ನಗರಾಭಿವೃದ್ಧಿ ಸಚಿವರ ಪತ್ರದಲ್ಲಿ ಮಾನ್ಯ ಮುಖ್ಯಮಂತ್ರಿರವರು ಈ ಕಾಮಗಾರಿ ಕೆಲಸವನ್ನು ತಕ್ಷಣ ಪ್ರಾರಂಭಿಸಲು ಆದೇಶಿಸಿರುವ ಹಿನ್ನೆಲೆಯಲ್ಲಿ, ಸದರಿ ಯೋಜನೆಯನ್ನು ಸಿದ್ಧಪಡಿಸಲಾಗಿರುತ್ತದೆ.

## ಈ ಯೋಜನೆಯ ಉದ್ದೇಶಿತ Concept Plan ನಲ್ಲಿರುವ ವಿವರಗಳು ಈ ಕೆಳಕಂಡಂತಿವೆ;

1. ಬೆಂಗಳೂರು–ತುಮಕೂರು ರೈಲು ಮಾರ್ಗದಲ್ಲಿ 8 ಪಥಗಳ ಆರ್.ಸಿ.ಸಿ ರೈಲ್ವೆ ಕೆಳಸೇತುವೆ (ಆರ್.ಯು.ಬಿ) ನಿರ್ಮಾಣ.
2. ಬೆಂಗಳೂರು–ಚೆನ್ನೈ ರೈಲು ಮಾರ್ಗದಲ್ಲಿ 8 ಪಥಗಳ ಆರ್.ಸಿ.ಸಿ ರೈಲ್ವೆ ಕೆಳಸೇತುವೆ (ಆರ್.ಯು.ಬಿ) ನಿರ್ಮಾಣ.
3. ಮಲ್ಲೇಶ್ವರಂ ಕಡೆಯಿಂದ ರಾಜಾಜಿನಗರಕ್ಕೆ ಸಂಚರಿಸುವ ವಾಹನಗಳು 1ನೇ ಹಂತದಲ್ಲಿ (ಅಂಡರ್‌ಪಾಸ್) 2 ಪಥಗಳಲ್ಲಿ ಸಂಚರಿಸಬಹುದು, ಇದರ ಉದ್ದ 272.92.ಮೀ.
4. ರಾಜಾಜಿನಗರ ಕಡೆಯಿಂದ ಮೆಜೆಸ್ಟಿಕ್ ಕಡೆಗೆ, ಮೆಜೆಸ್ಟಿಕ್‌ನಿಂದ ರಾಜಾಜಿನಗರದ ಕಡೆಗೆ ಸಂಚರಿಸುವ ವಾಹನಗಳು 8 ಪಥದ ರಸ್ತೆಯಲ್ಲಿ ಲೆವೆಲ್ 0 ನಲ್ಲಿ ಸಂಚರಿಸುತ್ತದೆ. ಇದರ ಉದ್ದ 665.00
5. ರೈಲು ನಿಲ್ದಾಣದಿಂದ ಮಲ್ಲೇಶ್ವರಂ ಕಡೆಗೆ ಹಾಗೂ ಮೆಜೆಸ್ಟಿಕ್ ಕಡೆಗೆ ಸಂಚರಿಸುವ ವಾಹನಗಳು 2 ಪಥದ +1 ಲೆವೆಲ್‌ನಲ್ಲಿ (Flyover) ಸಂಚರಿಸುತ್ತದೆ.ಇದರ ಉದ್ದ 233.73 ಮೀ.
6. ಮಲ್ಲೇಶ್ವರಂ ಹಾಗೂ ರಾಜಾಜಿನಗರದಿಂದ ರೈಲ್ವೇ ನಿಲ್ದಾಣಕ್ಕೆ ಸಂಚರಿಸುವ ವಾಹನಗಳು 2 ಪಥದ ರಸ್ತೆಯ +1 ಲೆವೆಲ್‌ನಲ್ಲಿ ಸಂಚರಿಸುತ್ತದೆ. (Flyover) ಇದರ ಉದ್ದ 222.55 ಮೀ.

Concept Plan ಅನ್ನು Minister of State for Railway ರವರ ಸಮ್ಮುಖದಲ್ಲಿ ದಿನಾಂಕ:06/11/2009 ರಂದು Presentation ಮಾಡಲಾಗಿದ್ದು, ಸನ್ಮಾನ್ಯ ಸಚಿವರು ಈ ಯೋಜನೆಯ ಬಗ್ಗೆ ತಕ್ಷಣ ಕ್ರಮ ಕೈಗೊಂಡು ಅಗತ್ಯ ಮಂಜೂರಾತಿ ನೀಡಲು ರೈಲ್ವೇ ಇಲಾಖೆಯ ಅಧಿಕಾರಿಗಳಿಗೆ ಆದೇಶಿಸಿರುತ್ತಾರೆ. ತದನಂತರ, ದಿನಾಂಕ 02/11/2010 ರಂದು Hon'ble Minister of State for Railway ಮತ್ತು ಕರ್ನಾಟಕ ರಾಜ್ಯ ಮುಖ್ಯ ಕಾರ್ಯದರ್ಶಿಯವರೊಂದಿಗೆ ನಡೆದ ಸಭೆಯಲ್ಲಿ ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಕ್ರಮ ಕೈಗೊಳ್ಳಲು ಮಾನ್ಯ ಸಚಿವರು ಸೂಚಿಸಿರುತ್ತಾರೆ.

ಈ ಯೋಜನೆ ಮತ್ತು ನಕ್ಷೆಗಳನ್ನು ತಯಾರಿಸಲಾಗಿರುತ್ತದೆ. ಸದರಿ ಕಾಮಗಾರಿಯು ತುರ್ತಾಗಿದ್ದುದರಿಂದ, ಮಾನ್ಯ ಆಯುಕ್ತರವರು ಸದರಿ ಯೋಜನೆಗೆ ಘನ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ, ಕೆ.ಟಿ.ಟಿ.ಪಿ ಕಾಯ್ದೆ 2009 ರ ಅನ್ವಯ ಫ್ರೀ ಕ್ವಾಲಿಫಿಕೇಷನ್ ಟೆಂಡರ್ ಅನ್ನು ಅಹ್ವಾನಿಸಲು ನೀಡಿರುವ ಆದೇಶದ ಮೇರೆಗೆ ಮೇಲಿನ ಯೋಜನೆಗೆ ಫ್ರೀ–ಕ್ವಾಲಿಫಿಕೇಷನ್ ಟೆಂಡರ್ ಅಹ್ವಾನಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

2009–10ನೇ ಸಾಲಿನ ಆಯವ್ಯಯದಲ್ಲಿ ಆರ್.ಓ.ಬಿ. ಮತ್ತು ಆರ್.ಯು.ಬಿ ಗಳಿಗಾಗಿ ರೂ..6667.93 ಲಕ್ಷಗಳನ್ನು ನಿಗಧಿಪಡಿಸಲಾಗಿದೆ. ಒಟ್ಟು 36 ಕಾಮಗಾರಿಗಳು ಇದ್ದು, ಇದರಲ್ಲಿ ಕ್ರಮ ಸಂಖ್ಯೆ (9), (18) ಮತ್ತು (32) ರ ಬದಲಿಗೆ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗಿತ್ತು.

ಈ ಯೋಜನೆಗೆ ಒಟ್ಟಾರೆ ರೂ.115.00 ಕೋಟಿಗಳ ಅವಶ್ಯಕತೆಯಿದ್ದು, ಯೋಜನೆಯು ಪ್ರಾರಂಬಿಕ ಹಂತದಲ್ಲಿರುವುದರಿಂದ, ಮೇಲೆ ತಿಳಿಸಿರುವಂತೆ ಕ್ರಮ ಸಂಖ್ಯೆ (9) (18) ಮತ್ತು (32) ರ ಕಾಮಗಾರಿ ಕೆಲಸಗಳಿಗೆ ನಿಗಧಿ ಮಾಡಿದ ರೂ.450.00 ಲಕ್ಷಗಳನ್ನು ಸದರಿ ಕಾಮಗಾರಿಗೆ ನಿಗಧಿಪಡಿಸಿಕೊಳ್ಳಬಹುದಾಗಿರುತ್ತದೆ ಉಳಿಕೆ ಹಣವನ್ನು 2010–11 ಹಾಗೂ 2011–12 ರ ಆಯವ್ಯಯದಲ್ಲಿ ಭರಿಸಿಕೊಳ್ಳಬಹುದಾಗಿರುತ್ತದೆ.

ಡಿ.ಪಿ.ಆರ್ ನಂತೆ ರೈಲ್ವೇ ಇಲಾಖೆಯ 12,818, ಚ.ಮೀ ಜಾಗದ ಹಾಗೂ ಖಾಸಗಿ ಜಾಗದ 251.00 ಚ.ಮೀ ಗೆ Land acquisition cost ನ್ನು ಹೊರತುಪಡಿಸಿ ತಯಾರಿಸಲಾಗಿರುವ ಅಂದಾಜು ಮೊತ್ತದ ವಿವರಗಳು ಈ ಕೆಳಕಂಡಂತೆ ಇರುತ್ತದೆ;

| | |
|---|---|
| ಕಾರಿಡಾರ್ ಮೊತ್ತ | 57,45,93,112.00 |
| ಬೃ.ಬೆ.ಮ.ಪಾಲಿಕೆಯಿಂದ ರೈಲ್ವೆಇಲಾಖೆ ಠೇವಣಿ | 28,00,00,000.00 |
| ಬೆಸ್ಕಾಂ ಮತ್ತು ಬಿ.ಡಬ್ಲ್ಯೂಎಸ್.ಎಸ್.ಬಿ.ಗೆ ಠೇವಣಿ ಇಡಬೇಕಾದ ಮೊತ್ತ | 20,34,18,622.00 |
| ಉಳಿದ ಕಾಮಗಾರಿಗಳ ಮೊತ್ತ | 7,05,32,964.00 |
| ಸಾದಿಲ್ವಾರು ಮೊತ್ತ (Contengencies) | 2,56,37,793.00 |
| ಇತರೆ ಮೊತ್ತ | 8,17,509.00 |
| Total Cost | 1,15,50,00,000.00 |

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿದೆ.

1. ಪ್ರಸ್ತಾಪಿಸಿರುವ ಕಾಮಗಾರಿಯ ಅಂದಾಜು ಮೊತ್ತ ರೂ.115.50 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಈ ಯೋಜನೆಯಿಂದ ರೈಲ್ವೇ ಇಲಾಖೆಯವರೆಗೂ ಅನುಕೂಲವಾಗುವುದರಿಂದ 12,818.00 ಚ.ಮೀ ಜಾಗವನ್ನು Mutual Consent ಅಥವಾ Land exchange ಆಧಾರದ ಮೇಲೆ ಪಡೆಯುವ ನಿರೀಕ್ಷೆಯ ಮೇರೆಗೆ ಕಾಮಗಾರಿ ಕೈಸಕ್ಕೆ ಮಂಜೂರಾತಿ.
3. ಖಾಸಗಿ 251. 00 ಚ.ಮೀ. ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅನುಮೋದನೆ.
4. ನೈರುತ್ಯ ರೈಲ್ವೇರವರಿಗೆ ಬೆಂಗಳೂರು ಚೆನ್ನೈ ರೈಲ್ವೆ ಲೈನ್ ಹಾಗೂ ಬೆಂಗಳೂರು ತುಮಕೂರು ರೇಲ್ವೆ ಲೈನ್‌ನಲ್ಲಿ ಆರ್.ಯು.ಬಿ. ಗಳನ್ನು ನೈರುತ್ಯ ರೇಲ್ವೆ ವತಿಯಿಂದ ನಿರ್ಮಾಣ ಮಾಡಲು ಅಗತ್ಯ ಹಣವನ್ನು ನೈರುತ್ಯ ರೈಲ್ವೆಗೆ ಠೇವಣಿ ಮಾಡಲು ಅನುಮೋದನೆ.
5. ಬೆಸ್ಕಾಂ, ಬಿ.ಡಬ್ಲ್ಯೂಎಸ್.ಎಸ್.ಬಿ. ಮತ್ತು ದೂರವಾಣಿ ಇಲಾಖೆಗಳಿಗೆ ಯುಟಿಲಿಟಿ ಶಿಫ್ಟಿಂಗ್ ಮಾಡಲು ಅಗತ್ಯ ಹಣ ಠೇವಣಿ ಮಾಡಲು ಅನುಮೋದನೆ.
6. ಅಲ್ಪಾವಧಿ ಟೆಂಡರ್ ಕರೆಯಲು ಅನುಮೋದನೆ.
7. ಸದರಿ ಕಾಮಗಾರಿಗೆ ಕಾಮಗಾರಿ ಸಂಕೇತ ಪಡೆಯಲು ಅನುಮೋದನೆ.

8. ಪ್ರಸ್ತಾಪಿಸಿರುವ ಯೋಜನೆಯ ಅಂದಾಜು ರೂ.115.50 ಕೋಟಿಗಳಾದ್ದರಿಂದ, ಸರ್ಕಾರದ ಅನುಮೋದನೆಗೆ ಪತ್ರ ಬರೆಯಲು ಅನುಮೋದನೆ.

ಮೇಲ್ಕಂಡ 8 (ಎಂಟು) ಅಂಶಗಳಿಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18-05-2010ರ ಟಿಪ್ಪಣಿ.

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು

ನಿರ್ಣಯ:- ದಿನಾಂಕ: 18-05-2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದು.

ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು

ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.

ನಿರ್ಣಯ:- ದಿನಾಂಕ: 18-05-2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.

ಎಸ್.ಕೆ. ನಟರಾಜ

(ಎಸ್.ಕೆ. ನಟರಾಜು)

ಮಹಾಪೌರರು